
# ಹಣ ಮತ್ತು ಪ್ರಾಣ

ವ್ಯಕ್ತಿಯೊಬ್ಬನು ಗ್ರಾಮಪ್ರದೇಶದಲ್ಲಿ ಹೋಗುತ್ತಿದ್ದನು. ಸ್ವಲ್ಪ ಭಯದಿಂದಲೂ ಆತುರದಿಂದಲೂ ನಡೆಯುತ್ತಿದ್ದ. ಬೇಗ ಬೇಗ ಹೆಜ್ಜೆ ಹಾಕುತ್ತಿದ್ದ. ಆಗ ಸಂಜೆಯಾಗುತ್ತಿತ್ತು. ಅವನು ಬೇಗ ಮನೆ ಸೇರಬೇಕಿತ್ತು.

ಈ ಆತುರದಲ್ಲಿ ಅವನು ಎಡವಿ ನೆಲಕ್ಕೆ ಬಿದ್ದನು. ತಲೆಗೆ ಪೆಟ್ಟಾಯಿತು. ರಕ್ತ ಸುರಿಯತೊಡಗಿತು. ಅವನು ಮೇಲೆದ್ದು ನಡೆಯುವ ಸ್ಥಿತಿಯಲ್ಲಿರಲಿಲ್ಲ. ಅಲ್ಲಿಯೆ ಸಂಕಟದಿಂದ ನರಳುತ್ತ ಬಿದ್ದಿದ್ದನು.



ಈ ವ್ಯಕ್ತಿಯು ಕೆಳಗೆ ಬಿದ್ದದ್ದನ್ನು ದೂರದಿಂದ ಗಮನಿಸಿದ ರೈತನೊಬ್ಬನು ಓಡಿ ಬಂದನು. ಅವನನ್ನು ಮೇಲೆತ್ತಲು ಕೈಚಾಚಿದನು. ಅಷ್ಟರಲ್ಲಿ ಕೆಳಗೆ ಬಿದ್ದಿದ್ದ ವ್ಯಕ್ತಿ 'ದೂರ ಸರಿ, ನನ್ನನ್ನು ಮುಟ್ಟಬೇಡ' ಎಂದು ಕೂಗಾಡಿದನು. ಅದನ್ನು ಲೆಕ್ಕಿಸದೆ ರೈತನು ಅವನನ್ನು ಮೇಲಕ್ಕೆ ಎತ್ತಲು ಮುಂದಾದನು. ಆಗ ವ್ಯಕ್ತಿಯು ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಿ ಅವನನ್ನು ದೂರ ತಳ್ಳಿದನು.

ತಲೆಗೆ ಪೆಟ್ಟು ಬಿದ್ದಿರುವುದರಿಂದ ಇವನ ಬುದ್ಧಿ ಸರಿಯಾಗಿ ಕೆಲಸ ಮಾಡುತ್ತಿಲ್ಲ, ಎಂದು ರೈತನು ಭಾವಿಸಿದನು. ಹೇಗಾದರೂ ಮಾಡಿ ಇವನನ್ನು ಎತ್ತಿಕೊಂಡುಹೋಗಿ ಆಸ್ಪತ್ರೆಗೆ ಸೇರಿಸಬೇಕು ಎಂದು ಅವನು ನಿರ್ಧರಿಸಿದನು. ಅದಕ್ಕಾಗಿ ಇತರ ಕೆಲವರನ್ನು ಕರೆದುಕೊಂಡು ಬರಲು ಆ ರೈತನು ಊರಕಡೆ ಧಾವಿಸಿದನು. ತನ್ನ ಸ್ನೇಹಿತರು ಕೆಲವರಿಗೆ ವಿಷಯವನ್ನು ತಿಳಿಸಿದ. ಅವರಲ್ಲನೇಕರು ಬರಲು ಒಪ್ಪಲಿಲ್ಲ. ಹೀಗೆ ಜನರನ್ನು ಹುಡುಕುವುದರಲ್ಲಿಯೆ ಬಹಳ ಹೊತ್ತು ಕಳೆದು ಹೋಯಿತು. ಅಂತು ಕೊನೆಗೆ ನಾಲ್ಕೈದು ಜನರನ್ನು ಕರೆದುಕೊಂಡು ಬಂದನು. ಕೆಳಗೆ ಬಿದ್ದ ವ್ಯಕ್ತಿ ಹಾಗೆಯೇ ಬಿದ್ದುಕೊಂಡಿದ್ದನು. ಇವರೆಲ್ಲ ಅವನ ಹತ್ತಿರ ಹೋದರು. ಹಿಂದೆ ಅಷ್ಟೊಂದು ಕೂಗಾಡಿದವನಲ್ಲಿ ಈಗ ಸದ್ದೇ ಇಲ್ಲ. ಬಂದವರು ಅವನನ್ನು ಮೇಲಕ್ಕೆತ್ತಲು ಪ್ರಯತ್ನಿಸಿದರು. ಆಗ ಅವನು ಪ್ರಾಣ ಬಿಟ್ಟಿರುವುದು ತಿಳಿಯಿತು.

ಅವನು ಯಾರು, ಎಲ್ಲಿಯವನು ಎಂದು ತಿಳಿಯುವುದಕ್ಕಾಗಿ ಅವನ ಬಟ್ಟೆ ಜೇಬುಗಳನ್ನು ಹುಡುಕಿದರು. ಅವನ ಜೇಬಿನಲ್ಲಿ ಒಂದು ದೊಡ್ಡ ನೋಟಿನ ಕಂತೆ ಸಿಕ್ಕಿತು—ಅನೇಕ ಲಕ್ಷ ಹಣವಿತ್ತು.

ಈಗ ಆ ರೈತನಿಗೆ ಅರ್ಥವಾಯಿತು, ಏಕೆ ಆ ವ್ಯಕ್ತಿ ತನ್ನನ್ನು ಮುಟ್ಟಲು ಬಿಡಲಿಲ್ಲ ಎಂದು. ತನ್ನ ಹಣ ಎಲ್ಲಿ ಕಳುವಾಗುವುದೊ ಎಂಬ ಭಯದಿಂದ ಅವನು ರೈತನಿಗೆ ತನ್ನನ್ನು ಮುಟ್ಟಲು ಬಿಡಲಿಲ್ಲ. ಹಣ ಉಳಿಸಿಕೊಳ್ಳುವ ಕಾತರದಲ್ಲಿ ಪ್ರಾಣ ಕಳೆದುಕೊಂಡಿದ್ದನು.

**ಪ್ರಾಣವಿದ್ದರೆ ತಾನೆ ಹಣದಿಂದ ಪ್ರಯೋಜನ. ಪ್ರಾಣಕ್ಕಾಗಿ ಹಣವನ್ನು ತೆರಬೇಕೇ ಹೊರತು, ಹಣಕ್ಕಾಗಿ ಪ್ರಾಣವನ್ನಲ್ಲ. ನಾವು ವಸ್ತುಗಳ ವ್ಯಾಮೋಹದಿಂದಾಗಿ ಜೀವನವನ್ನೇ ಕಡೆಗಣಿಸುತ್ತೇವೆ. ಇದು ತಪ್ಪು. ಜೀವನ ಮುಖ್ಯ, ಅದನ್ನು ಉತ್ತಮಗೊಳಿಸುವುದು ಮುಖ್ಯ. ಹಣ ಮತ್ತು ಇತರ ವಸ್ತುಗಳು ಅದಕ್ಕೆ ಎಷ್ಟರಮಟ್ಟಿಗೆ ಸಹಾಯ ಮಾಡುತ್ತವೋ ಅಷ್ಟರ ಮಟ್ಟಿಗೆ ಅವಕ್ಕೆ ಬೆಲೆ.**